**Order Sheet**
**In the Court Of: I Addl. CIVIL JUDGE AND JMFC BELAGAVI AT BELGAUM**
**F.R.No:O.S./1321/2014**
**Case Reg.No: O.S./1316/2014**

**Plaintiff** V E R S U S **Defendent**

---

**1)Shri. Pandurang So. Krishnaji Patil**

**1)Shri. Narayan S. Basawant Patil &5 others**

**2)Smt. Sunita Wo. Gajanan Patil**
**3)Smt. Kalpana Wo. Ashok Kalkhambkar**
**4)Shri. Suresh Krishnaji Patil**
**5)Shri. Monappa Krishnaji Patil**

ಪ್ರಮಾಣ ವಚನ ಬೋಧಿಸಿದ ತಾಃ 28-11-2016

ಪಾಟೀ ಸವಾಲು ಃ ಶ್ರೀ ಆರ್ ಕೆ ಪಿ, 5ನೇ ಪ್ರತಿವಾದಿ ಪರ ವಕೀಲರಿಂದ

ಈ ದಾವೆಯನ್ನು ಹೂಡಲು ನಾನು ಸ್ವತಃ ಮಾಹಿತಿ ನೀಡಿರುತ್ತೇನೆ. ದಾವಾ ಸ್ವತ್ತು ಪೂರ್ವ ಪಶ್ಚಿಮಕ್ಕೆ ಅಗಲ ಹಾಗೂ ಉತ್ತರ ದಕ್ಷಿಣಕ್ಕೆ ಉದ್ದ ಇರುತ್ತದೆ. ದಾವಾ ಸ್ವತ್ತಿನ ಪೂರ್ವಕ್ಕೆ ಗೋಮಾಳ ಜಮೀನು ಇರುತ್ತದೆ. ಪಶ್ಚಿಮಕ್ಕೆ ಕಲ್ಲಪ್ಪ ತೋನುಪಾಟೀಲ ಅವರ ಹಾಗೂ ಪುಂಡಲೀಕ ಕೇದಾರಿ ರಾಜಾಯಿ ಅವರ ಜಮೀನು ಇರುತ್ತದೆ. ಪಶ್ಚಿಮಕ್ಕೆ ಪರಶುರಾಮ ವೈಜು ಚಿಕ್ಕಲಕರ ಅವರ ಜಮೀನು ಸಹ ಇರುತ್ತದೆ. ದಕ್ಷಿಣಕ್ಕೆ ಕಲ್ಲಪ್ಪ ಪಾವಶೆ ಅವರ ಜಮೀನು ಇರುತ್ತದೆ. ಉತ್ತರಕ್ಕೆ ಮಾರ್ಕಂಡೇಯ ನದಿ ಇರುತ್ತದೆ. ಮಾರ್ಕಂಡೇಯ ನದಿಯಲ್ಲಿ ಸಾಕಷ್ಟು ನೀರು ಇರುತ್ತದೆ. ದಾವಾ ಸ್ವತ್ತೀನ ಉತ್ತರಕ್ಕೆ ನದಿಗೆ ಹೋಗಲು ಸಾರ್ವಜನಿಕ ಜಮೀನು ಇರುತ್ತದೆ. ಸದ್ರಿ ಸಾರ್ವಜನಿಕ ಜಮೀನಿನಲ್ಲಿ 3 ಬಾವಿಗಳು ಇರುತ್ತವೆ ಎಂದರೆ ಕೇವಲ ಒಂದು ಬಾವಿ ಇರುತ್ತದೆ ಎಂದು

ಹೇಳುತ್ತಿದ್ದೇನೆ. ಇನ್ನೊಂದು ಹಾಳು ಬಾವಿ ಇರುತ್ತದೆ. ನಾವೆಲ್ಲ ಒಂದೇ ಬಾವಿಯನ್ನು ಉಪಯೋಗಿಸುತ್ತಿದ್ದೆವು ಎಂದರೆ ಸರಿಯಲ್ಲ. ಬಸವಂತ ಪಾಟೀಲ ಅವರ ಸಹ ಸದ್ರಿ ಬಾವಿಯನ್ನು ಉಪಯೋಗಿಸುತ್ತಿದ್ದರು ಎಂದರೆ ಸರಿಯಲ್ಲ. ಸದ್ರಿ ಬಾವಿಗೆ ಡಿಸೇಲ ಇಂಜಿನನ್ನು ಕೂಡಿಸಲಾಗಿರುತ್ತದೆ ಎಂದರೆ ಸರಿಯಲ್ಲ. ನಾನು ಹೊಸದಾಗಿ ನಿರ್ಮಿಸಲಾದ ಬಾವಿಯನ್ನು ಉಪಯೋಗಿಸುತ್ತಿದ್ದೇನೆ. ಮೋನಪ್ಪ ಪಾಟೀಲ ಅವರ ಬಾವಿ ಬೇರೆ ಇರುತ್ತದೆ ಎಂದರೆ ಸರಿಯಲ್ಲ. ನಾನು ಸ್ವತಃ ಎರಡು ಬಾವಿಗಳನ್ನು ಹೊಂದಿರುತ್ತೇನೆ. ಸದ್ರಿ ಸ್ಥಳದಲ್ಲಿ ನನ್ನ ಸ್ವಂತ ಎರಡು ಬಾವಿಗಳು ಇರುತ್ತವೆ ಎಂದು ತೋರಿಸಲು ಅಕ್ಕ-ಪಕ್ಕದವರ ಜವಾಬ ಮಾಡಿಸಲು ನನಗೆ ಏನು ತೊಂದರೆ ಇದೆ ಎಂದು ಕೇಳಲು, ಅಕ್ಕ-ಪಕ್ಕದವರ ಸಾಕ್ಷ್ಯವನ್ನು ನನಗೆ ಹೇಗೆ ಮಾಡಿಸಲು ಬರುತ್ತದೆ ಎಂದು ನುಡಿಯುತ್ತೇನೆ. ದಾವಾ ಸ್ವತ್ತನ್ನು ನಾನು ಹಾಗೂ ಪ್ರತಿವಾದಿಗಳು ಜಂಟಿ ಕುಟುಂಬದ ಆದಾಯದಿಂದ ಖರೀದಿ ಮಾಡಿರುತ್ತೇವೆ ಎಂದರೆ ಸರಿಯಲ್ಲ. ದಾವಾ ಸ್ವತ್ತಿನ ಉತ್ತರದ ಭಾಗವು 1 ರಿಂದ 3 ನೇ ಪ್ರತಿವಾದಿಗಳಿಗೆ ಸೇರಿರುತ್ತದೆ ಎಂದರೆ ಸರಿಯಲ್ಲ. ಉಳಿದ ಭಾಗ ನನ್ನ ಹಿಸ್ಸೆಗೆ ಬಂದಿರುತ್ತದೆ ಎಂದರೆ , ಸಂಪೂರ್ಣ ಜಮೀನು ನನಗೆ ಸೇರಿರುತ್ತದೆ. ಇನ್ನೊಂದು ಭಾಗವು 4 ನೇ ಪ್ರತಿವಾದಿಗೆ ಸೇರಿರುತ್ತದೆ ಎಂದರೆ ಸರಿಯಲ್ಲ. ನಂತರದ ದಕ್ಷಿಣದ ಭಾಗವು 5 ನೇ ಪ್ರತಿವಾದಿಗೆ ಸೇರಿರುತ್ತದೆ ಎಂದರೆ ಸರಿಯಲ್ಲ. ಪ್ರತಿವಾದಿಗಳ ಹೆಸರುಗಳು ದಾವಾ ಸ್ವತ್ತಿಗೆ ಸಂಬಂಧಿಸಿದಂತೆ ನಮೂದು ಆಗಿರುತ್ತದೆ ಎಂದರೆ ಸರಿಯಲ್ಲ. ದಿನಾಂಕ 10-10-2002 ರಂದು ನಾನು ಸಮ್ಮತಿ ಪತ್ರವನ್ನು ಮಾಡಿ ಕೊಟ್ಟಿರುತ್ತೇನೆ ಎಂದರೆ ಸರಿಯಲ್ಲ. ಸದ್ರಿ ಸಮ್ಮತಿ ಪತ್ರವನ್ನು 5ನೇ ಪ್ರತಿವಾದಿಯ ಹೆಸರನ್ನು ದಾಖಲೆಗಳಲ್ಲಿ ನಮೂದಿಸಲು ಮಾಡಿಕೊಟ್ಟಿರುತ್ತೇನೆ ಎಂದರೆ ಸರಿಯಲ್ಲ. 1985 ರಿಂದ ಪ್ರತಿವಾದಿಗಳ ಹೆಸರು ದಾವಾ ಸ್ವತ್ತಿನ ಪಹಣಿ ಪತ್ರಿಕೆಗಳಲ್ಲಿ ನಮೂದು ಆಗಿರುತ್ತದೆ ಎಂದರೆ ನಾನು ಆ ಬಗ್ಗೆ ಯಾವುದೇ ಪತ್ರವನ್ನು ಮಾಡಿಕೊಟ್ಟಿರುವದಿಲ್ಲ. ಆ ದಿನಾಂಕದಿಂದ ಪ್ರತಿವಾದಿಗಳು ತಮ್ಮ ತಮ್ಮ ಹಿಸ್ಸೆಯ ಕಬ್ಜೆಯನ್ನು ಹೊಂದಿರುತ್ತಾರೆ ಎಂದರೆ ಸರಿಯಲ್ಲ. 1985 ರಿಂದ ನಾನು ಯಾವುದೇ ತಕರಾರನ್ನು ಮಾಡಿರುವದಿಲ್ಲ ಎಂದರೆ ಸಾಕ್ಷಿಯು ನನಗೆ ಅದರ ಬಗ್ಗೆ ಮಾಹಿತಿ ಇರಲಿಲ್ಲ. ದಾವಾ ಸ್ವತ್ತಿನ ತೆರಿಗೆಯನ್ನು ನಾನು ಪಾವತಿಸಿದ್ದು , ಪಾವತಿ ರಶೀದಿಗಳನ್ನು ನಾನು ಹಾಜರುಪಡಿಸಿರುತ್ತೇನೆ. ಈಗ

ನಾನು ಹಾಜರುಪಡಿಸಿರುವ ದಾಖಲೆಗಳನ್ನು ನೋಡುತ್ತಿದ್ದು , ಸದ್ರಿ ತೆರಿಗೆ ಪಾವತಿಗಳನ್ನು ಹಾಜರುಪಡಿರುತ್ತೇನೋ ಇಲ್ಲವೋ ನನಗೆ ಗೊತ್ತಿಲ್ಲ. ನಾನು ದಾವಾ ಸ್ವತ್ತಿನ ಸಂಪೂರ್ಣ ಮಾಲೀಕ ಅಲ್ಲದೇ ಇರುವದರಿಂದ ತೆರಿಗೆ ಪಾವತಿ ರಶೀದಿಗಳನ್ನು ಹಾಜರುಪಡಿಸಿಲ್ಲ ಎಂದರೆ ಸರಿಯಲ್ಲ. ನಾನು ಮತ್ತು ಪ್ರತಿವಾದಿಗಳು ಒಂದೇ ಕುಟುಂಬದ ಸದಸ್ಯರಾಗಿದ್ದು, ಒಟ್ಟು ಕುಟುಂಬದ ಆದಾಯ ದಿಂದ ದಾವಾ ಸ್ವತ್ತನ್ನು ಖರೀದಿಸಿರುತ್ತೇವೆ ಎಂದರೆ ಸರಿಯಲ್ಲ. 2014 ರಲ್ಲಿ ಪ್ರತಿವಾದಿಗಳು ದಾವಾ ಸ್ವತ್ತಿನಲ್ಲಿ ಕಬ್ಜೆ ಮಾಡಲು ಪ್ರಯತ್ನಿಸಿರುತ್ತಾರೆ ಎಂದು ನಾನು ಸುಳ್ಳು ನುಡಿದಿರುತ್ತೇನೆ ಎಂದರೆ ಸರಿಯಲ್ಲ. ನಾನು ಆ ಬಗ್ಗೆ ಪೋಲಿಸ ದೂರನ್ನು ನೀಡಿದ್ದು ಅದರ ದಾಖಲೆಗಳನ್ನು ಹಾಜರುಪಡಿಸಿರುವದಿಲ್ಲ. ಅದರ ದಾಖಲೆಗಳನ್ನು ಹಾಜರುಪಡಿಸಲು ನನಗೆ ಯಾವುದೇ ತೊಂದರೆ ಇಲ್ಲ. 5 ನೇ ಪ್ರತಿವಾದಿಗೆ ತೊಂದರೆ ನೀಡಲು ನಾನು ಸುಳ್ಳು ದಾವೆಯನ್ನು ಹೂಡಿರುತ್ತೇನೆ ಎಂದರೆ ಸರಿಯಲ್ಲ.

ಮುಂದುವರೆದ ವಿಚಾರಣೆ ಇಲ್ಲ.

(ತೆ. ನ್ಯಾ. ಸಾಕ್ಷಿಯ ಹೇಳಿಕೆಯ ಮೇ ರೆಗೆ ಬೆರಳಚ್ಚು ಮಾಡಲಾಯಿತು)

ಓ. ಹೇ. ಕೇ. ಸರಿಯಿದೆ.

Sd/-

1ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರ ನ್ಯಾಯಾಲಯ
ಮತ್ತು ಜೆಎಮ್‌ಎಫ್‌ಸಿ, ಬೆಳಗಾವಿ.